ಮೆಃ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಮುಧೋಳ

ಸಿ.ಸಿ ನಂ- 1240/2018

ಚಾಸಾ-1 ಪ್ರಾಸಾ-2

| | |
|---|---|
| ಹೆಸರು | ರವೀಂದ್ರ ಕರಲಿಂಗಣ್ಣವರ |
| ಗಂಡನ/ತಂದೆಯ ಹೆಸರು | ನಿಂಗಪ್ಪ |
| ವಯಸ್ಸು | 45 ವರ್ಷ |
| ಉದ್ಯೋಗ | ಮುಖ್ಯ ಆಡಳಿತಾಧಿಕಾರಿ ಕಿಮ್ಸ್ |
| ವಾಸಸ್ಥಳ | ಹುಬ್ಬಳ್ಳಿ |

**ದಿನಾಂಕಃ 24-07-2023 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ- ಶ್ರಿ. ಎ.ಪಿ.ಪಿ., ರವರಿಂದ ಃ**

2016 ರಿಂದ 2018 ರವರೆಗೆ ಜಮಖಂಡಿಯ ಸಹಾಯಕ ಆಯುಕ್ತರು ಎಂದು ಕರ್ತವ್ಯ ನಿರ್ವಹಿಸಿದ್ದೇನೆ. ಆ ಕಾಲಕ್ಕೆ ಚಾಸಾ-3, 5 ರಿಂದ 10 ಅವರು ಸರ್ಕಾರಿ ನೌಕರಾಗಿ ಜಮಖಂಡಿ ಮತ್ತು ಮುಧೋಳದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು.

23-02-2018 ರಿಂದ 25-02-2018 ವರಗೆ ಮುಧೋಳದಲ್ಲಿ ರನ್ನ ವೈಭವ 2018, 5 ನೇ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಯಾಕ್ರಮದ ಕೊನೆಯ ದಿನ 25-02-2018 ರಂದು ಸ್ಥಳೀಯ ಕಲಾವಿದರಿಗೆ, ರಾಜ್ಯ ಮಟ್ಟದ ಕಲಾವಿದರಿಗೆ ಹಾಗೂ ರಾಷ್ಟ್ರ ಮಟ್ಟದ ಕಲಾವಿದರಿಗೆ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ನಾವು ಕಾರ್ಯಕ್ರಮ ನಿಗದಿ ಪಡಿಸಿದ ಸಮಯಕ್ಕೆ ಆರೋಪಿತರ ತಂಡ ಬರದೇ ಇದ್ದ ಕಾರಣ, ರಾಜ್ಯ ಮತ್ತು ರಾಷ್ಟು ಮಟ್ಟದ ಕಲಾವಿದರಿಗೆ ಕಾರ್ಯಕ್ರಮ ಮುಂದುವರೆಸುವಂತೆ ಅವಕಾಶ ನೀಡಿದ್ದು, ಆಗ ಆರೋಪಿತರು ತಮಗೆ ಅವಕಾಶ ಕೊಡಿ ಎಂದು ಕೇಳಿದ್ದರಿಂದ ಈಗಾಗಲೇ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕಲಾವಿದರು ಕಾರ್ಯಕ್ರಮ ನಡೆಸುತ್ತಿದ್ದರಿಂದ ಅವರ ಕಾರ್ಯಕ್ರಮ ಮುಗಿದ ನಂತರ ಆರೋಪಿತರಿಗೆ ಅವಕಾಶ ಕೊಡುವುದಾಗಿ ಭರವಸೆ ನೀಡಿದೇವು.

ಇದಾದ ನಂತರ 12-30 ಗಂಟೆಯ ಸುಮಾರಿಗೆ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕಲಾವಿದರ ಕಾರ್ಯಾಕ್ರಮ ಮುಕ್ತಾಯಗೊಂಡಿದ್ದರಿಂದ ಆರೋಪಿತರಿಗೆ ಅವರ ಕಾರ್ಯಾಕ್ರಮವನ್ನು ಮಾಡುವಂತೆ ಕೇಳಿದಕ್ಕೆ ಆರೋಪಿತರು ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕಲಾವಿದರ ಕಾರ್ಯಾಕ್ರಮದ ಮುಂಚೆಯೇ ನಮಗೆ ಅವಕಾಶ ಕೊಡಬೇಕಿತ್ತು ಎಂದು ಕೋಪಗೊಂಡು ಸರ್ಕಾರ ವಿರುದ್ದ ಘೋಷಣೆ ಕೂಗುತ್ತಾ , ಸರ್ಕಾರಿ ಕರ್ತವ್ಯಕ್ಕೆ ಅಡ್ಡಿ ಪಡಿಸಿ, ವೇದಿಕೆ ಮೇಲೆ ಇರುವ ವೈಯರ, ಮೈಕ್ ಮತ್ತು ಧ್ವನಿವರ್ದಕಗಳನ್ನು ಕಿತ್ತು ಎಸೆದು ಪ್ರೇಕ್ಷಕರಿಗೆ ಕೂಡಲು ಇರಿಸಿದ ಚೇರಗಳನ್ನು ಕಿತ್ತು, ತೆಗೆದು ಅವುಗಳನ್ನು ಚಲ್ಲಾ-ಪಿಲ್ಲಿ ಮಾಡಿ ಮುರಿದು ಸಾರ್ವಜನಿಕ ಆಸ್ತಿಯನ್ನು ಹಾಳು ಮಾಡಿ, ಕರ್ತವ್ಯದಲ್ಲಿ ನಿರತರಿದ್ದ ಸರ್ಕಾರಿ ನೌಕರರಿಗೆ ಅವಾಚ್ಯವಾಗಿ ಬೈದಾಡಿ, ಜೀವ ಬೆದರಿಕೆ ಹಾಕಿರುತ್ತಾರೆ. ಗಲಾಟೆಯಿಂದ ಪ್ರೇಕ್ಷಕರು ಗಾಬರಿಗೊಂಡು ಅಲ್ಲಿಂದ ಓಡಿ ಹೋಗಿರುತ್ತಾರೆ.

ಆ ಕಾಲಕ್ಕೆ  ಚಾಸಾ-3 ಮತ್ತು 5 ರಿಂದ 10 ಅವರು ಹಾಜರು ಇದ್ದರು. ನಂತರ ನಾನು ಪೊಲೀಸರಿಗೆ ಕರೆಯಿಸಿ ಗಲಾಟೆಯನ್ನು ತಿಳಿಗೊಳಿಸಿದೆ ಹಾಗೂ ಪೊಲೀಸರು ಗಲಾಟೆ ಮಾಡಿದ ಆರೋಪಿತರನ್ನು ಹಿಡಿದುಕೊಂಡರು. ಈ ಬಗ್ಗೆ ನಾನು ಪೊಲೀಸರ ಮುಂದೆ ಫಿರ್ಯಾದಿಯನ್ನು ನೀಡಿರುತ್ತೇನೆ. ಸಾಕ್ಷಿಯು ಫಿರ್ಯಾದಿಯನ್ನು ನೋಡಿ ಗುರುತಿಸಿದ್ದ, ಅದನ್ನು ನಿಪಿ-11 ಎಂದು ಅದರಲ್ಲಿಯ ಸಾಕ್ಷಿ ಸಹಿಯನ್ನು ನಿಪಿ-11 ಎ ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿತರನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ ಹಾಜರು ಪಡಿಸಿದ ಮು.ಮಾ -1 ರಿಂದ 10 ನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಪೊಲೀಸರ ಮುಂದೆ ನಾನು ಪುನಃರ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಶ್ರೀ ಬಿ.ಆರ್.ಡಿ ಅವರಿಂದಃ**

ರನ್ನ ವೈಭವ ಕಾರ್ಯಕ್ರಮ ದಿಃ 23-02-2018 ರಿಂದ 25-02-2018 ರವರೆಗೆ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮವು  ಸಾಯಂಕಾಲ 4 ರಿಂದ ರಾತ್ರಿ 12 ಮತ್ತು 1-00 ಗಂಟೆಯವರೆಗೂ ಆಗುತ್ತಿತ್ತು. ಮುಂದುವರೆದು ಸಾಕ್ಷಿ ಕೆಲವು ಕಾರ್ಯಮಗಳನ್ನು ಬೆಳಗಿನ ಸಮಯದಲ್ಲಿ ಆಯೋಜಿಸಲಾಗುತ್ತಿತು ಎಂದು ನುಡಿಯುತ್ತಾರೆ. ವೇದಿಕೆಯ ಮೇಲೆ ಯಾರೆಲ್ಲ ಇರಬೇಕು ಎಂದು ಪೂರ್ವನಿಗಧಿಯಾಗಿತ್ತು ಎಂದರೆ ಸರಿ. ವೇದಿಕೆಯ ಮುಂಭಾಗದಲ್ಲಿ ವಿ.ಐ.ಪಿ ಗಳಿಗೆ ಒಂದು ಸಾಲು ಹಾಗೂ  ಉಳಿದ ಸಾರ್ವಜನಿಕರಿಗೆ ಹಾಗೂ ಇನ್ನೊಂದು ಭಾಗ ಕಲಾವಿದರಿಗೆ ಎಂದು ಆಸನಗಳನ್ನು ಮಿಸಲಿರಸಲಾಗಿತ್ತು ಎಂದರೆ ಸರಿ . ಈ ಕಾರ್ಯಾದಲ್ಲಿ ಪೋಲಿಸರ ಬಂದೊಬಸ್ತಿ ಇತ್ತು ಎಂದರೆ ಸರಿ .

ದಿಃ 25-02-2018 ರಂದು ಕಾರ್ಯಕ್ರಮದ ಸಮಾರೋಪ ಸಮಾರಂಭದ ಕಾರ್ಯಾಕ್ರಮ ಇತ್ತು ಎಂದರೆ ಸರಿ . ಈ ದಿನ ಕಾರ್ಯಕ್ರಮ ರಾತ್ರಿ 10 ಗಂಟೆಯಗೆ ಮುಕ್ತಾಯವಾಗಿತ್ತು ಎಂದರೆ ಸರಿಯಲ್ಲ. ದಿಃ 25-02-2018 ರಂದು ಸ್ಥಳೀಯ ಕಲಾವಿದರ ಸಂಘಗಳಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ನೀಡಲಾಗಿತ್ತು ಎಂದರೆ ಸರಿ. ಆದರೆ ಆ ಸಂಘಗಳು ಯಾವವು ಎಂದು ಒಂದು ಪಟ್ಟಿ ಮಾಡಲಾಗಿತ್ತು. ಈಗ ಅದು ನೆನಪಿಲ್ಲ.

ಅದೇ ರೀತಿ ರಾಜ್ಯ ಮಟ್ಟದ ಕಲಾವಿದರಿಗೆ ಹಾಗೂ ರಾಷ್ಟ್ರ ಮಟ್ಟದ ಕಲಾವಿದರರ ಸಂಘಗಳಿಗೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು ಎಂದರೆ ಸರಿ ಆದರೆ ಆ ಸಂಘಗಳ ಹೆಸರು ಈಗ ನೆನಪಿಲ್ಲ. ರನ್ನ ವೈಭವದ ಕಾರ್ಯಾಕ್ರಮದಲ್ಲಿ ಸಾಕಷ್ಟು ಜನ ಸೇರಿದ್ದರು ಎಂದರೆ ಸರಿ. 2018 ನೇ  ರನ್ನ ವೈಭವದ ಅವಧಿಯಲ್ಲಿ ಕಾಂಗ್ರೆಸ ಸರ್ಕಾರ ಅಧಿಕಾರದಲ್ಲಿತ್ತು ಎಂದರೆ ಸರಿ.  ಆರೋಪಿತರು ಬಿಜೆಪಿ ಪಕ್ಷದ ಕಾರ್ಯಕರ್ತರು ಎಂದರೆ ನನಗೆ ಗೊತ್ತಿಲ್ಲ.

ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿತರ ಹೆಸರಗಳಲ್ಲಿ ಕೆಲವರ ಹೆಸರು ನನಗೆ ಗೊತ್ತು. ಅವರಲ್ಲಿ ಬಸವರಾಜ , ಗೋಪಾಲ , ನಾಮದೇವ , ಕುಬೇರ ಇಷ್ಟು ಜನರ ಹೆಸರು ಮಾತ್ರ ನೆನಪಿದೆ. ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿತರಲ್ಲಿ ಮೇಲೆ ಹೆಸರಿಸಿದ ಆರೋಪಿತರು ಯಾರು ಎಂದು ಗುರುತಿಸಲು ಕೇಳಿದಾಗ ಸಾಕ್ಷಿ ಈಗ ಮುಖ ಪರಿಚಯ ನೆನಪಿಲ್ಲ ಎಂದು ನುಡಿಯುತ್ತಾರೆ. ವೇದಿಯ ಮೇಲೆ ವಿಐಪಿ ಚೇರಗಳನ್ನು ಹಾಕಿರುತ್ತಾರೆ ಎಂದರೆ ಸರಿ. ಮುಂದುವರೆದು ಸಾಕ್ಷಿಯು ಕಾರ್ಯಕ್ರಮ ನಡೆಯುವಾಗ ವೇದಿಕೆಯ ಮೇಲಿನ ಎಲ್ಲ ಚೇರಗಳು ಪಕ್ಕಕ್ಕೆ ಸರಿಸಲಾಗಿತ್ತು ಎಂದು ನುಡಿಯುತ್ತಾರೆ.

ದಿಃ 25-02-2018 ರಂದು ಮುಧೋಳಕ್ಕೆ ರಾಹುಲ ಗಾಂಧಿ ಅವರು ಬಂದಿದ್ದರು ಎಂದರೆ ಸಾಕ್ಷಿ ರನ್ನ ವೈಭವದ ಸಂದರ್ಭದಲ್ಲಿ ಬಂದಿದ್ದರು ಆದರೆ ದಿಃ 25-02-2018 ರಂದು ಬಂದಿದರ ಬಗ್ಗೆ ನನಗೆ ಗೊತ್ತಿಲ್ಲ. ರಾಹುಲ ಗಾಂಧಿ ಅವರು ಬಂದಿದ್ದ ಕಾರಣ ಮುಧೋಳದಲ್ಲಿ ಸಂಚಾರ ದಟ್ಟಣೆಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸಂಚಾರ ದಟ್ಟಣೆಯಾಗಿದ್ದರಿಂದ ಆರೋಪಿತರು ವೇದಿಕೆಗೆ ಬರಲು ತಡವಾಗಿತು ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿಯು ಆರೋಪಿತರು ಕಾರ್ಯಕ್ರಮದ ಆವರಣದಲ್ಲಿದ್ದರೂ ಸಹಿತ ಬರಲಿಲ್ಲ ಎಂದು ನುಡಿಯುತ್ತಾರೆ. ಈ ವಿಷಯ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತರು ಸರ್ಕಾರಿ ಕರ್ತವ್ಯಕ್ಕೆ ಯಾವುದೇ ಅಡ್ಡಿ ಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರು ತಮಗೆ ಮೊದಲ ಅವಕಾಶ ಕೊಟ್ಟಿಲ್ಲ ಎಂದು ಸಿಟ್ಟಿನಿಂದ ವೇದಿಕೆಯ ಮೇಲೆ ಇದ್ದ ಧ್ವನಿ ವರ್ದಕ, ವೈಯರ ಮತ್ತು ಮೈಕಗಳನ್ನು ಕಿತ್ತು ಎಸೆದು ಚೇರಗಳನ್ನು ಮುರಿದು ಹಾಕಿದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ಸರ್ಕಾರ ಕರ್ತವ್ಯದ ಮೇಲೆ ಇದ್ದ ಚಾಸಾ-3 ಮತ್ತು 5 ರಿಂದ 10 ಅವರಿಗೆ ಅವಾಚ್ಯವಾಗಿ ಬೈದಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಆರೋಪಿತರು ಹಾನಿ ಪಡಿಸಿದ ಧ್ವನಿ ವರ್ದಕ, ವೈಯರ ಮತ್ತು ಮೈಕಗಳನ್ನು ಪೊಲೀಸರು ವಶ ಪಡಿಸಿಕೊಂಡ ಬಗ್ಗೆ ನನಗೆ ಮಾಹಿತಿ ಇಲ್ಲ . ನ್ಯಾಯಾಲಯದ ಮುಂದೆ ಹಾಜರು ಪಡಿಸಿದ ಮುದ್ದೆಮಾಲುಗಳಿಗೂ ಹಾಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ಇದೇ ಮೊದಲ ಬಾರಿ ನೋಡುತ್ತಿದ್ದೇನೆಂದರೆ ಸರಿಯಲ್ಲ.

ಘಟನೆಯ ಸಂಬಂಧ , ಘಟನೆಯಾದ ನಂತರ ರಾತ್ರಿ 1 ರಿಂದ 2 ಗಂಟೆಯ ಸಮಯದಲ್ಲಿ ಪೊಲೀಸ ಠಾಣೆಗೆ ಒಂದು ಬಾರಿ ಹೋಗಿರುತ್ತೇನೆ. ಸದರಿ ಘಟನೆಯ ಕುರಿತು ಪೊಲೀಸರ ಮುಂದೆ ನನ್ನ ಹೇಳಿಕೆ ನೀಡಿದ್ದು , ಆದರೆ ಯಾವ ದಿನಾಂಕ ಎಂದು ನೆನಪಿಲ್ಲ. ನಾನು ಉದ್ದೇಶಪೂರ್ವಕವಾಗಿ ಜಿಲ್ಲಾ ಉಸ್ತುವಾರಿ ಅವರ ಮಾತು ಕೇಳಿ ಆರೋಪಿತರ ವಿರುದ್ದ ಸುಳ್ಳು ಪಿರ್ಯಾದಿ ದಾಖಲಿಸಿ , ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮುಜ್ಯ ವಿಚಾರಣೆಯಲ್ಲಿನ ಸಂಗತಿ ಸುಳ್ಳು ಎಂದರ ಸರಿಯಲ್ಲ .

**ಪಾಟೀ ಸವಾಲು :** **ಆರೋಪಿ ನಂ. 6 ರಿಂದ 9 ಪರ ವಕೀಲರು ಶ್ರೀ ಎಚ.ಕೆ.ಎಂ ಅವರಿಂದಃ**
**( ಸದರಿಯವರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ವಿನಂತಿಸಿದ್ದರಿಂದ ಅವರ ಮನವಿಯನ್ನು ಪುರಸ್ಕರಿಸಿ ) ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-
ಹೆಚ್ಚುವರಿ ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ